# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕೋಲಾರ ಜಿಲ್ಲೆ, ಮಾಲೂರು ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಅಂತಿಮ ಅನುಮೋದನೆ ನೀಡುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ನಅಇ 51 ಬೆಂರೂಪ್ರಾ 2019, ದಿನಾಂಕ:24.12.2019.
2. ಸದಸ್ಯ ಕಾರ್ಯದರ್ಶಿ, ನಗರ ಯೋಜನಾ ಪ್ರಾಧಿಕಾರ, ಮಾಲೂರು ಇವರ ಪತ್ರ ಸಂಖ್ಯೆಗಳು:
   a. ಮಾ.ಯೋ.ಪ್ರಾ/ಮ.ಯೋ/(ಅಂತಿಮ)/2021-22/132, ದಿನಾಂಕ 23.12.2021.
   b. ಮಾ.ಯೋ.ಪ್ರಾ/ಮ.ಯೋ/2021-22/679, ದಿನಾಂಕ:05.02.2022.
   c. ಮಾ.ಯೋ.ಪ್ರಾ.ಮ.ಯೋ-2021-22/837, ದಿನಾಂಕ:28.03.2022.
3. ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ರವರ
   a. ಏಕ ಕಡತ ಸಂಖ್ಯೆ: DTCP-11-MPP-2017-18, ದಿನಾಂಕ: 29.01.2022.
   b. ಪತ್ರ ಸಂಖ್ಯೆ DTCP-11-MPP-2017-18, ದಿನಾಂಕ: 08.04.2022.

ಸದಸ್ಯ ಕಾರ್ಯದರ್ಶಿ

*******

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಾಂಕ (1) ರ ಸರ್ಕಾರದ ಆದೇಶದಲ್ಲಿ ಮಾಲೂರು ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ತಾತ್ಕಾಲಿಕ ಅನುಮೋದನೆಯನ್ನು ನೀಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2)(a) ರ ಪತ್ರದಲ್ಲಿ ಮಾಲೂರು ಯೋಜನಾ ಪ್ರಾಧಿಕಾರವು ಮಾಲೂರು ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸಿದ್ಧಪಡಿಸಿರುವ ಮಹಾಯೋಜನೆ ಕುರಿತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 13(1)(2) ರನ್ವಯ ಅಗತ್ಯ ಕ್ರಮ ಜರುಗಿಸಿ ಮಹಾಯೋಜನೆಯ ನಕ್ಷೆಗಳನ್ನು ಹಾಗೂ ವರದಿಯನ್ನು ತಯಾರಿಸಿ ಸರ್ಕಾರದ ಅಂತಿಮ ಅನುಮೋದನೆಗಾಗಿ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ರವರ ಮುಖಾಂತರ ಪ್ರಸ್ತಾವನೆಯನ್ನು ಸಲ್ಲಿಸಿರುತ್ತದೆ. ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ರವರು ಉಲ್ಲೇಖ 3(a) ರಲ್ಲಿ ಪ್ರಸ್ತಾವನೆಯನ್ನು ಪರಿಗಣಿಸಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲ್ಕಂಡಂತೆ ಮಾಲೂರು ಯೋಜನಾ ಪ್ರಾಧಿಕಾರವು ಸಲ್ಲಿಸಿದ್ದ ಮಹಾಯೋಜನೆಯಲ್ಲಿ ಕೆಲವೊಂದು ಜಮೀನುಗಳು ಸರ್ಕಾರಿ ಗೋಮಾಳದ ಪ್ರದೇಶವಾಗಿದ್ದು, ಇವುಗಳನ್ನು Industrial Hub ಗೆ ಕೈಗಾರಿಕಾ ಉದ್ದೇಶದ ಭೂ ಉಪಯೋಗವನ್ನು ಕಾಯ್ದಿರಿಸಲಾಗಿದ್ದು, ಈ ಜಮೀನುಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಕೈಗಾರಿಕೆ ಉದ್ದೇಶಕ್ಕೆ ಪ್ರಸ್ತಾವನೆ ಇರುವ ಕುರಿತು ಪರಿಶೀಲಿಸಿಕೊಂಡು ಭೂ ಉಪಯೋಗವನ್ನು ನಿಗಧಿಪಡಿಸುವಂತೆ ದಿನಾಂಕ 01.02.2022 ರಂದು ಸರ್ಕಾರದ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಿರ್ದೇಶನ ನೀಡಲಾಗಿರುತ್ತದೆ.

2....,

ಕ್ರ.ಸಂ. 298
ದಿನಾಂಕ 20/5/22
ಮಾಲೂರು - 563130

ಮೇಲೆ ಓದಲಾದ ಕ್ರಮ ಸಂಖ್ಯೆ(2)(b) ರ ಪತ್ರದಲ್ಲಿ ಮಾಲೂರು ಯೋಜನಾ ಪ್ರಾಧಿಕಾರವು ಗೋಮಾಳ ಪ್ರದೇಶಗಳನ್ನು ಕೈಗಾರಿಕಾ ಪ್ರದೇಶದಿಂದ ಕೃಷಿ ವಲಯಕ್ಕೆ ಕಾಯ್ದಿರಿಸಿ ಮಹಾಯೋಜನೆಯಲ್ಲಿ ಅಳವಡಿಸಿ ಸರ್ಕಾರದ ಅಂತಿಮ ಅನುಮೋದನೆಗಾಗಿ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ರವರ ಮುಖಾಂತರ ಪ್ರಸ್ತಾವನೆಯನ್ನು ಸಲ್ಲಿಸಿರುತ್ತದೆ.

ಮೇಲ್ಕಂಡಂತೆ ಪ್ರಾಧಿಕಾರವು ಸಲ್ಲಿಸಿರುವ ನಕ್ಷೆಗಳನ್ನು ಪರಿಶೀಲಿಸಿ, ಸದರಿ ಗೋಮಾಳ ಪ್ರದೇಶದಲ್ಲಿ ಈಗಾಗಲೇ ಕೆಲವೊಂದು ಪೋಡಿಯಾಗಿದ್ದು, ಅವುಗಳಿಗೆ ಪ್ರತ್ಯೇಕ ಸರ್ವೆ ನಂಬರ್ ನೀಡಿರುವುದರಿಂದ, ನಕ್ಷೆಗಳನ್ನು ಸಂಬಂಧಿಸಿದ ಇಲಾಖೆಯಿಂದ ಪಡೆದು ಕೈಗಾರಿಕೆ ಇಲಾಖೆಯ ಪ್ರಸ್ತಾವನೆಗಳು ಇದ್ದಲ್ಲಿ ಅವುಗಳನ್ನು ಪರಿಶೀಲಿಸಿ ಸಲ್ಲಿಸಲು ದಿನಾಂಕ: 28.02.2022 ರಂದು ಸರ್ಕಾರದ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಿರ್ದೇಶನ ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ 2(c) ರ ಪತ್ರದಲ್ಲಿ ಮಾಲೂರು ಯೋಜನಾ ಪ್ರಾಧಿಕಾರವು ಗೋಮಾಳ ಪ್ರದೇಶಗಳು ಈಗಾಗಲೇ ಸಾರ್ವಜನಿಕರಿಗೆ ಮಂಜೂರಾಗಿರುವುದು ಕಂಡುಬಂದಿರುವುದರಿಂದ ಆದರೆ ಪೋಡಿ / ದುರಸ್ತಿಯಾಗಿ ಗ್ರಾಮ ನಕ್ಷೆಯಲ್ಲಿ ಕಾಲೋಚಿತವಾಗಿಲ್ಲದಿರುವುದರಿಂದ ಪ್ರಾಧಿಕಾರವು ಉಲ್ಲೇಖ 2(a) ರಲ್ಲಿ ಸಲ್ಲಿಸಿದ್ದ ಪ್ರಸ್ತಾವನೆಯಂತೆ ಮಹಾಯೋಜನೆಗೆ ಅಂತಿಮ ಅನುಮೋದನ ನೀಡುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತದೆ.

ಮೇಲೆ ಓದಲಾದ ಕ್ರಮಾಂಕ 3(b) ರಂತೆ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ಇವರು ಸಲ್ಲಿಸಿರುವ ಪ್ರಸ್ತಾವನೆಯಲ್ಲಿ, ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿನ ಸರ್ಕಾರಿ ಗೋಮಾಳ ಪ್ರದೇಶದಲ್ಲಿ Industrial Hub ಉದ್ದೇಶಕ್ಕೆ ಪ್ರಸ್ತಾಪಿಸಿರುವ ಜಮೀನುಗಳ ಪೈಕಿ ಸಾರ್ವಜನಿಕರಿಗೆ ಮಂಜೂರಾಗದೇ ಇರುವ ಪ್ರದೇಶಗಳನ್ನು ಗೋಮಾಳಕ್ಕೆ ಕಾಯ್ದಿರಿಸಿದೆ ಎಂದು ಭಾವಿಸತಕ್ಕ ಷರತ್ತು ವಿಧಿಸಿ ಪ್ರಾಧಿಕಾರವು 2(a) ರಂತೆ ಸಲ್ಲಿಸಿದ್ದ ಪ್ರಸ್ತಾವನೆಯನ್ನು ಪರಿಗಣಿಸಲು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಮೇಲ್ಕಂಡಂತೆ ಪ್ರಾಧಿಕಾರವು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ದಿನಾಂಕ: 05.04.2021 ರ ಪತ್ರದ ಮನವಿಯಂತೆ ಹಾಗೂ ಸರ್ಕಾರಿ ಗೋಮಾಳ ಜಮೀನುಗಳು ಈಗಾಗಲೇ ಸಾರ್ವಜನಿಕರಿಗೆ ಮಂಜೂರಾಗಿರುವುದು ಕಂಡುಬಂದಿರುವುದರಿಂದ ಆದರೆ ಪೋಡಿ / ದುರಸ್ತಿಯಾಗಿ ಗ್ರಾಮ ನಕ್ಷೆಯಲ್ಲಿ ಕಾಲೋಚಿತವಾಗಿಲ್ಲದಿರುವುದರಿಂದ ಈ ಹಿಂದೆ ಉಲ್ಲೇಖ 2(a) ರಂತೆ ಪ್ರಾಧಿಕಾರವು ದಿನಾಂಕ: 23.12.2021 ರಂದು ಸಲ್ಲಿಸಿರುವ ನಕ್ಷೆಗಳಂತೆ ಮಹಾಯೋಜನೆಗೆ ಅಂತಿಮ ಅನುಮೋದನ ನೀಡಲು ದಿನಾಂಕ: 07.04.2022 ರಂದು ಸರ್ಕಾರದ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

ಮೇಲೆ ಓದಲಾದ ಉಲ್ಲೇಖ 3(a) ರಂತೆ ಮಾಲೂರು ಪಟ್ಟಣದ ಜನಸಂಖ್ಯೆಯು 2031 ರಲ್ಲಿ 1,50,000 ಗಳಷ್ಟು ಬೆಳವಣಿಗೆಯಾಗುವುದಾಗಿ ಅಂದಾಜಿಸಿ ಮಹಾಯೋಜನೆಯನ್ನು ಸಿದ್ಧಪಡಿಸಿದ್ದು, ಮಾಲೂರು ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಒಟ್ಟು 3,210.45 ಹೆಕ್ಟೇರ್ ಪ್ರದೇಶವನ್ನು ನಗರದ ಅಭಿವೃದ್ಧಿಗಾಗಿ ನಗರೀಕರಣದ ಎಲ್ಲೆಯೆಂದು ಪ್ರಸ್ತಾಪಿಸಿ ಮಹಾಯೋಜನೆಯನ್ನು ರೂಪಿಸಲಾಗಿದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 12 ರಲ್ಲಿ ನಿಗಧಿಪಡಿಸಿರುವ ಅಂಶಗಳನ್ನು ಪರಿಗಣಿಸಿ ನಗರದ ಮುಂದಿನ ಯೋಜಿತ ಬೆಳವಣಿಗೆಗೆ ಪ್ರಸ್ತಾಪಿಸಿರುವ 3,210.45 ಹೆಕ್ಟೇರ್ ಪ್ರದೇಶದಲ್ಲಿ ವಸತಿಗಾಗಿ 1462.67 ಹೆಕ್ಟೇರ್ (ಶೇ.45.56), ವಾಣಿಜ್ಯಕ್ಕಾಗಿ 172.75 ಹೆಕ್ಟೇರ್ (ಶೇ.5.38), ಕೈಗಾರಿಕೆಗಾಗಿ 599.39 ಹೆಕ್ಟೇರ್(ಶೇ.18.67), ಸಾರ್ವಜನಿಕ /

3....,

ಅರೆ ಸಾರ್ವಜನಿಕ ಉಪಯಯೋಗಕ್ಕೆ 114.59 ಹೆಕ್ಟೇರ್, (ಶೇ.3.57) ಉದ್ಯಾನವನ ಮತ್ತು ಬಯಲು ಜಾಗಕ್ಕಾಗಿ 283.45 ಹೆಕ್ಟೇರ್ (ಶೇ.8.83) ಸಾರ್ವಜನಿಕ ಉಪಯುಕ್ತತೆಗಾಗಿ 4.18 ಹೆಕ್ಟೇರ್ (ಶೇ. 0.13), ಹಾಗೂ ಸಾರಿಗೆ / ಸಂಪರ್ಕ ವಲಯಕ್ಕೆ 573.42 ಹೆಕ್ಟೇರ್ (ಶೇ. 17.86) ಪ್ರದೇಶವನ್ನು ನಿಗಧಿಪಡಿಸಲಾಗಿದೆ. ಮಹಾಯೋಜನೆಯನ್ನು ಅನುಷ್ಠಾನಕ್ಕೆ ತರಲು ಅಗತ್ಯವಿರುವ ವಲಯ ನಿಯಮಾವಳಿಗಳನ್ನು ರೂಪಿಸಲಾಗಿದ್ದು, ಸದರಿ ಮಹಾಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 13(3) ರನ್ವಯ ಅಂತಿಮ ಅನುಮೋದನೆ ನೀಡಲು ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ:ನಅಇ 28 ಬೆಂರೂಪ್ರಾ 2022, ಬೆಂಗಳೂರು,</u>**
**ದಿನಾಂಕ: 09.05.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಮಾಲೂರು ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶಕ್ಕೆ ರೂಪಿಸಿರುವ ಮಹಾಯೋಜನೆಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಪ್ರಕರಣ 13(3) ರನ್ವಯ ಸರ್ಕಾರದ ಅಂತಿಮ ಅನುಮೋದನೆ ನೀಡಲಾಗಿದೆ. ಮಹಾಯೋಜನೆಗೆ ಅಂತಿಮ ಅನುಮೋದನೆ ನೀಡಿದ ಗುರುತಾಗಿ ವರದಿ ಹಾಗೂ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

**ಷರತ್ತುಗಳು:**

1. ಈ ಆದೇಶವಾದ ದಿನಾಂಕದಿಂದ ಎರಡು ವರ್ಷಗಳವರೆಗೆ ಪ್ರಾಧಿಕಾರವು ಯಾವುದೇ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದಲ್ಲ;
2. ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿನ ಸರ್ಕಾರಿ ಗೋಮಾಳ ಪ್ರದೇಶದಲ್ಲಿ Industrial Hub ಉದ್ದೇಶಕ್ಕೆ ಪ್ರಸ್ತಾಪಿಸಿರುವ ಜಮೀನುಗಳ ಪೈಕಿ ಮಂಜೂರಾಗದೇ ಇರುವ ಪ್ರದೇಶಗಳನ್ನು ಗೋಮಾಳಕ್ಕೆ ಕಾಯ್ದಿರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಲತಾ.ಕೆ)**
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ)
ನಗರಾಭಿವೃದ್ಧಿ ಇಲಾಖೆ.
9/05/2022

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಇವರಿಗೆ ಸದರಿ ಆದೇಶವನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿ ಪ್ರಕಟಿತ 100 ಪ್ರತಿಗಳನ್ನು ನಗರಾಭಿವೃದ್ಧಿ ಇಲಾಖೆಗೆ ಕಳುಹಿಸುವಂತೆ ಕೋರಿದೆ.

**ಪ್ರತಿಯನ್ನು ಇವರಿಗೆ:**

1. ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು.

2. ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆ, ಕೋಲಾರ.
3. ನಗರ ಮತ್ತು ಗ್ರಾಮಂತರ ಯೋಜನಾ ಜಂಟಿ ನಿರ್ದೇಶಕರು, ವಿಭಾಗೀಯ ಕಚೇರಿ, ಬೆಂಗಳೂರು.
4. ಸದಸ್ಯ ಕಾರ್ಯದರ್ಶಿ, ಮಾಲೂರು ಯೋಜನಾ ಪ್ರಾಧಿಕಾರ, ಮಾಲೂರು.
5. ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಚೇರಿ, ಕೋಲಾರ.
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.